KAHS610020412016

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಕುಸುಮ.ವಿ** ಬಿ.ಎ.ಎಲ್., ಎಲ್ ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಸಿ.ಸಿ. ಸಂಖ್ಯೆ:752/2016**

**ದಿನಾಂಕ : 03 ನೇ ಜೂನ್ 2026**

**ಫಿರ್ಯಾದಿದಾರರು** : ರಾಜ್ಯದ ಪರವಾಗಿ
ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ.

**(ಪ್ರತಿನಿಧಿಸುವವರು : ಸಹಾಯಕ ಸರ್ಕಾರಿ ಅಭಿಯೋಜಕರಿಂದ)**

**ವಿರುದ್ಧ**

**ಆರೋಪಿ** : ಬಾಬು.ಆರ್,
ಬಿನ್ ಲೇಟ್ ರಂಗೇಶ.ಜಿ,
ಸುಮಾರು 44 ವರ್ಷ,
ವಾಸಃ 12/1, 1ನೇ ಕ್ರಾಸ್, ರಕ್ಕಮ್ಮ ಬ್ಲಾಕ್,
ಮುದ್ದಮ್ಮ ಗಾರ್ಡನ್, ಬೆನ್ಸ ಸಾನ್ ಟೌನ್ ಪೋಸ್ಟ್,
ಬೆಂಗಳೂರು-46, ಬೆಂಗಳೂರು ಸಿಟಿ,
ಕರ್ನಾಟಕ.
**(ಶ್ರೀ ಸಿ.ಎಸ್.ಡಿ. ವಕೀಲರಿಂದ)**

1. ಘಟನೆ ಸಂಭವಿಸಿದ ದಿನಾಂಕ ಃ 24.09.2015
2. ಘಟನೆ ವರದಿಯಾದ ದಿನಾಂಕ ಃ 25.09.2015
3. ಫಿರ್ಯಾದಿದಾರರ ಹೆಸರು ಃ ಬಾಬುರಾಜ್.ಸಿ.ವಿ

4. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ ಃ 14.10.2019
5. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ ಃ 09.01.2025
6. ಆರೋಪಿಸಲಾದ ಅಪರಾಧಗಳು ಃ ಭಾ.ದಂ.ಸಂ. ಕಲಂ.279
7. ನ್ಯಾಯಾಧೀಶರ ಅಭಿಪ್ರಾಯ ಃ ಕೊನೆಯ ಆದೇಶದಂತೆ.

## ತೀರ್ಪು

ಆರಕ್ಷಕ ನಿರೀಕ್ಷಕರು, ನಗರ ಪೊಲೀಸ್ ಠಾಣೆ, ಚನ್ನರಾಯಪಟ್ಟಣ, ಇವರು ಆರೋಪಿಗಳು ಭಾ.ದಂ.ಸಂ. ಕಲಂ. 279 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷೀಪ್ತ ವಿವರಣೆ :-**

ಸಾಕ್ಷಿ.2 ರವರು ಕೇರಳ ರಾಜ್ಯ ಕೆ.ಎಸ್.ಆರ್.ಟಿ.ಸಿ ಕಾಸರಗೋಡು ಡಿಪೋದಲ್ಲಿ ಬಸ್ ಚಾಲಕರಾಗಿದ್ದು, ದಿನಾಂಕ 24.09.2015 ರಂದು ಸಾಕ್ಷಿ.2 ಕಾಸರಗೋಡಿನಿಂದ ಬೆಂಗಳೂರಿಗೆ ಹೋಗಲು ಕಾಸರಗೋಡು ಡಿಪೋದ ಕೆಎಲ್.15.ಎ.272 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಕರನ್ನು ಕೂರಿಸಿಕೊಂಡು ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ರಾತ್ರಿ 8.00 ಗಂಟೆಗೆ ಕಾಸರಗೋಡು ಬಿಟ್ಟು, ದಿನಾಂಕ 25.09.2015 ರಂದು ಬೆಳಗಿನ ಜಾವ 02.30 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಶೆಟ್ಟಿಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ಎನ್‌ಹೆಚ್.75, ಬಿ.ಎಂ ರಸ್ತೆಯ ಉತ್ತರದ ಕಡೆಯಲ್ಲಿರುವ ಹಂಪ್ ಹತ್ತಿರ ಹೋಗುತ್ತಿದ್ದಾಗ ಆರೋಪಿತನು ಕೆಎ.01.ಎಫ್.8262 ನೇ ನಂಬರಿನ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಸಾಕ್ಷಿ.2 ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಕೆಎಲ್.15.ಎ.272 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿಪಡಿಸಿದ ಪರಿಣಾಮ ಬಸ್ಸಿನ ಹಿಂಭಾಗದ ಗ್ಲಾಸು ಹಾಗೂ ಬಸ್ಸಿನ ಹಿಂಭಾಗ ಜಖಂಗೊಂಡಿದ್ದು ಹಾಗೂ ಈ ಸಂಬಂಧ ಚಾಸಾ.1 ರವರು ದೂರನ್ನು ನೀಡಿದ್ದು, ಸದರಿ ಆರೋಪಿತನ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರನ್ನು ಆಧರಿಸಿ ಆರೋಪಿ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ ನಂತರ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

**3.** ಆರೋಪಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂಃ 207ರ ಪ್ರಕಾರ ಅಭಿಯೋಜನೆಯ

ಪ್ರಕರಣದ ಪ್ರತಿಗಳನ್ನು ಆರೋಪಿಗೆ ಪೂರೈಸಲಾಯಿತು. ವಾದವನ್ನು ಕೇಳಿದ ನಂತರ ಆರೋಪಿಯನ್ನು ಈ ಪ್ರಕರಣದಿಂದ ಕೈ ಬಿಡಲು ಯಾವುದೇ ಸಕಾರಣಗಳು ಇಲ್ಲದಿದ್ದರಿಂದ ಆರೋಪಿ ವಿರುದ್ಧ ಆಪಾದನೆಯನ್ನು ತಯಾರಿಸಿ, ಓದಿ ಹೇಳಿದ್ದು, ಆರೋಪಿ ಆಪಾದನೆಯನ್ನು ಅಲ್ಲಗಳೆದು ತಪ್ಪು ಮಾಡಿಲ್ಲ, ಪ್ರಕರಣ ವಿಚಾರಣೆ ಆಗಬೇಕೆಂದು ಕೇಳಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರಿಗೆ ತಮ್ಮ ಸಾಕ್ಷ್ಯ ನೀಡಲು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡಲಾಯಿತು. ಅಭಿಯೋಜನೆಯು ಚಾಸಾ. 1, 2, 5, 4, 12, 13 ಮತ್ತು 3 ರವರನ್ನು ಪ್ರಾಸಾ.1 ರಿಂದ ಪ್ರಾಸಾ.7 ಎಂದು ವಿಚಾರಣೆಗೊಳಪಡಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ದಾಖಲೆಗಳನ್ನು ನಿಪಿ.1 ರಿಂದ ನಿಪಿ.7 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂಃ 313ರ ಅಡಿಯಲ್ಲಿ ಆರೋಪಿ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿ ತನ್ನ ಪರ ಯಾವುದೇ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

**4.** ಅಭಿಯೋಜನೆಯ ಪರ ಹಾಗೂ ಆರೋಪಿ ಪರ ವಕೀಲರ ವಾದಗಳನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಲಾಯಿತು.

**5.** ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ :1** ದಿನಾಂಕಃ 24.09.2015 ರಂದು ಸಾಕ್ಷಿ.2 ರವರು ಕಾಸರಗೋಡಿನಿಂದ ಬೆಂಗಳೂರಿಗೆ ಹೋಗಲು ಕಾಸರಗೋಡು ಡಿಪೋದ ಕೆಎಲ್.15.ಎ.272 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಕರನ್ನು ಕೂರಿಸಿಕೊಂಡು ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ರಾತ್ರಿ 08.00 ಗಂಟೆಗೆ ಕಾಸರಗೋಡು ಬಿಟ್ಟು ದಿಃ 25.09.2015 ರಂದು ಬೆಳಗಿನ ಜಾವ 02-30 ಗಂಟೆಯ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಶೆಟ್ಟಿಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ಎನ್.ಹೆಚ್.75 ಬಿ.ಎಂ.ರಸ್ತೆಯ ಉತ್ತರದ ಕಡೆಯಲ್ಲಿರುವ ಹಂಪ್ಸ್ ಹತ್ತಿರ ಹೋಗುತ್ತಿದ್ದಾಗ ಆರೋಪಿಯು ಕೆಎ.01.ಎಫ್.8262 ನೇ ನಂಬರಿನ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುತ್ತೀರಿ, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂಃ 279** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಆರೋಪಿ

ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ ?

**ಅಂಶ – 2** ಃ ಯಾವ ಆದೇಶ ?

**6.** ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

ಅಂಶ 1 ಃ **ನಕಾರಾತ್ಮಕವಾಗಿ**

ಅಂಶ 5 ಃ ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

**: : ಕಾರಣಗಳು : :**

**7.** **ಅಂಶ ಸಂಖ್ಯೆ – 1** ಃ ಸಾಕ್ಷಿ.2 ರವರು ಕೇರಳ ರಾಜ್ಯ ಕೆ.ಎಸ್.ಆರ್.ಟಿ.ಸಿ ಕಾಸರಗೋಡು ಡಿಪೋದಲ್ಲಿ ಬಸ್ ಚಾಲಕರಾಗಿದ್ದು, ದಿನಾಂಕ 24.09.2015 ರಂದು ಸಾಕ್ಷಿ.2 ಕಾಸರಗೋಡಿನಿಂದ ಬೆಂಗಳೂರಿಗೆ ಹೋಗಲು ಕಾಸರಗೋಡು ಡಿಪೋದ ಕೆಎಲ್.15.ಎ.272 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ, ಪ್ರಯಾಣಿಕರನ್ನು ಕೂರಿಸಿಕೊಂಡು ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ರಾತ್ರಿ 8.00 ಗಂಟೆಗೆ ಕಾಸರಗೋಡು ಬಿಟ್ಟು, ದಿನಾಂಕ 25.09.2015 ರಂದು ಬೆಳಗಿನ ಜಾವ 02.30 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಶೆಟ್ಟಿಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ಎನ್‌ಹೆಚ್-75, ಬಿ.ಎಂ ರಸ್ತೆಯ ಉತ್ತರದ ಕಡೆಯಲ್ಲಿರುವ ಹಂಪ್ ಹತ್ತಿರ ಹೋಗುತ್ತಿದ್ದಾಗ ಆರೋಪಿತನು ಕೆಎ.01.ಎಫ್.8262 ನೇ ನಂಬರಿನ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಸಾಕ್ಷಿ.2 ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಕೆಎಲ್.15.ಎ.272 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿಪಡಿಸಿದ ಪರಿಣಾಮ ಬಸ್ಸಿನ ಹಿಂಭಾಗದ ಗ್ಲಾಸು ಹಾಗೂ ಬಸ್ಸಿನ ಹಿಂಭಾಗ ಜಖಂಗೊಂಡಿರುತ್ತದೆ ಎಂಬುದಾಗಿ ಇರುತ್ತದೆ.

**8.** ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪವನ್ನು ಸಾಬೀತುಪಡಿಸುವುದಕ್ಕಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.1 ರವರು ಪಿರ್ಯಾದುದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ:24.09.2015 ರಾತ್ರಿ 08.00

ಬೆಂಗಳೂರಿಗೆ ಬಸ್ ರೂಟಿನ ನಂಬರ್ ಕೆಎಲ್.15.ಎ.272 ಬಸ್ಸಿಗೆ ಕಂಡಕ್ಟರ್ ಆಗಿ ತನ್ನನ್ನು ಹಾಗೂ ಚಾಲಕರಾಗಿ ಕೆ.ಎನ್.ಕೃಷ್ಣ ಭಟ್ ರವರನ್ನು ನೇಮಿಸಿದ್ದು ರಾತ್ರಿ 08.00 ಗಂಟೆಗೆ ಕಾಸರಗೋಡಿನಿಂದ ಬೆಂಗಳೂರಿಗೆ ಹೊರಟಿದ್ದು, ಚನ್ನರಾಯಪಟ್ಟಣದ ಹತ್ತಿರ ಶೆಟ್ಟಿಹಳ್ಳಿ ಎಂಬ ಗ್ರಾಮದ ಎನ್.ಹೆಚ್.75 ರಸ್ತೆಯಲ್ಲಿ ಬರುತ್ತಿದ್ದಾಗ, ಕರ್ನಾಟಕದ ಕೆ.ಎಸ್.ಆರ್.ಟಿ.ಸಿ ಬಸ್ ಸಂಖ್ಯೆ ಕೆಎ.1.ಎಫ್.8262 ರ ಬಸ್ ಅತಿವೇಗವಾಗಿ ಹಿಂಬದಿಯಿಂದ ಬಂದು ತಮ್ಮ ಬಸ್ಸಿನ ಹಿಂಬದಿಗೆ ಡಿಕ್ಕಿಪಡಿಸಿತು, ಬಸ್ಸಿನ ಹಿಂಭಾಗದ ಗ್ಲಾಸ್ ಹೊಡೆದು ಹೋಗಿದ್ದು, ಬಸ್ಸಿನ ಹಿಂಬದಿ ಜಖಂಗೊಂಡಿರುತ್ತದೆ, ಈ ಬಗ್ಗೆ ತಾನು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಪ್ರಾಸಾ.1 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ತಾನು ಹಿಂದುಗಡೆಯಿಂದ ಶಬ್ದ ಬಂದಾಗ ಎದ್ದು ನೋಡಿರುವುದಾಗಿ ನುಡಿದಿದ್ದು, ತಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಪ್ರಾಸಾ.1 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**9.** ಚಾಸಾ.2 ರವರನ್ನು ಪ್ರಾಸಾ.2 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ದಿಃ 24.09.2015 ರಂದು ರಾತ್ರಿ 08.00 ಗಂಟೆ ಸುಯದಲ್ಲಿ ಬೆಂಗಳೂರಿಗೆ ಬಸ್ ರೂಟಿನ ನಂಬರ್ ಕೆಎಲ್.15.ಎ.272 ಬಸ್ಸಿಗೆ ಚಾಲಕನಾಗಿ ತನ್ನನ್ನು ಹಾಗೂ ನಿರ್ವಾಹಕನಾಗಿ ಚಾಸಾ.1 ರವರನ್ನು ನೇಮಿಸಿದ್ದು ರಾತ್ರಿ 08.00 ಗಂಟೆಗೆ ಕಾಸರಗೋಡಿನಿಂದ ಬೆಂಗಳೂರಿಗೆ ಹೊರಟಿದ್ದು, ಚನ್ನರಾಯಪಟ್ಟಣದ ಹತ್ತಿರ ಶೆಟ್ಟಿಹಳ್ಳಿ ಎಂಬ ಗ್ರಾಮದ ಎನ್.ಹೆಚ್.75 ರಸ್ತೆಯಲ್ಲಿ ಬರುತ್ತಿದ್ದಾಗ, ಬೆಳಗಿನ ಜಾವ 02.30 ಗಂಟೆ ಸಮಯದಲ್ಲಿ ಒಂದು ಕೆ.ಎ.ಆರ್.ಟಿ.ಸಿ ಬಸ್ ಹಿಂದುಗಡೆಯಿಂದ ಬಂದು ಡಿಕ್ಕಿಪಡಿಸಿತು, ಆಗ ತಮ್ಮ ಬಸ್ಸಿಗೆ ಹಿಂದಿನ ಗ್ಲಾಸ್ ಮತ್ತು ಹಿಂಬದಿಯ ಬಾಡಿ ಜಖಂ ಆಗಿತ್ತು, ಕರ್ನಾಟಕದ ಕೆ.ಎ.ಆರ್.ಟಿ.ಸಿ ಬಸ್ ಸಂಖ್ಯೆ ಕೆಎ.01.ಎಫ್.8262 ರ ಬಸ್ ಆಗಿತ್ತು, ಈ ಬಗ್ಗೆ ಚಾಸಾ.1 ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ನಂತರ ಪೊಲೀಸರು ಬೆಳಿಗ್ಗೆ 11.00 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಬಂದು ಮಹಜರ್ ಬರೆದಿರುತ್ತಾರೆ, ಮಹಜರ್ ಕಾಲಕ್ಕೆ ಎರಡು ಬಸ್ ಗಳನ್ನು ಪೊಲೀಸ್ ಠಾಣೆಗೆ ತಂದಿರುತ್ತಾರೆ, ಮಹಜರ್ ಕಾಲಕ್ಕೆ ಇಬ್ಬರು ಸಾಕ್ಷಿದಾರರು ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಪ್ರಾಸಾ.2 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ಸದರಿ ಬಸ್ಸುಗಳು ಭಾರಿ ವಾಹನಗಳಾಗಿರುವುದರಿಂದ ಹಾಗೂ ಆ ಸಮಯದಲ್ಲಿ ಮಳೆ ಬೀಳುತ್ತಿದ್ದುದರಿಂದ ಎರಡೂ ವಾಹನಗಳನ್ನು ನಿಯಂತ್ರಿಸಲು

ಸಾಧ್ಯವಾಗಿಲ್ಲ ಎಂದು ನುಡಿದಿದ್ದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**10.** ಚಾಸಾ.5 ಮತ್ತು ರವರನ್ನು ಪ್ರಾಸಾ.3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.3 ರವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ನಿಪಿ-2 ಆದ ಮಹಜರ್ ಗೆ ಸಹಿಯನ್ನು ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ, ನಿಪಿ.2 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ, ಪೊಲೀಸರು ತನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3 ರವರನ್ನು ಪಾಟೀಸವಾಲನ್ನು ಮಾಡಿದರೂ, ಇವರ ಸಾಕ್ಷ್ಯದಿಂದ ಯಾವುದೇ ಅಂಶಗಳು ಹೊರಬಂದಿರುವುದಿಲ್ಲ.

**11.**ಚಾಸಾ.4 ರವರನ್ನು ಪ್ರಾಸಾ.4 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.4 ರವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ನಿಪಿ-2 ಆದ ಮಹಜರ್ ಗೆ ಸಹಿಯನ್ನು ಈಗೆ 5-6 ವರ್ಷಗಳ ಹಿಂದೆ ನಗರ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇವೆ ಯಾವ ವಿಚಾರಕ್ಕೆಂದು ಗೊತ್ತಿಲ್ಲ, ನಿಪಿ.2 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ, ಪೊಲೀಸರು ತನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ ಮತ್ತು ಯಾವುದೇ ವಾಹನಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.4 ರವರನ್ನು ಪಾಟೀಸವಾಲನ್ನು ಮಾಡಿದರೂ, ಇವರ ಸಾಕ್ಷ್ಯದಿಂದ ಯಾವುದೇ ಅಂಶಗಳು ಹೊರಬಂದಿರುವುದಿಲ್ಲ.

**12.** ಚಾಸಾ.12 ಮತ್ತು 13 ರವರನ್ನು ಪ್ರಾಸಾ.5 ಮತ್ತು 6 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.5 ಮತ್ತು 6 ರವರು ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ತಾನು ತನಿಖೆಯನ್ನು ಕೈಗೊಂಡ ಬಗ್ಗೆ ಮತ್ತು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ.

**13.** ಚಾಸಾ.3 ರವರನ್ನು ಪ್ರಾಸಾ.7 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.7 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ದಿಃ 23.09.2015 ರಂದು ರಾತ್ರಿ 11.10 ಗಂಟೆಗೆ ತಾನು ಮತ್ತು ಆರೋಪಿಯು ತಮ್ಮ ಕೆಎ.01.ಎಫ್.8262 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಬೆಂಗಳೂರಿನಿಂದ ಹೊರಟಿದ್ದು, ಆರೋಪಿಯು ಸದರಿ ಬಸ್ಸಿನ ಚಾಲಕನಾಗಿರುತ್ತಾನೆ, ತಾನು ನಿರ್ವಾಹಕನಾಗಿರುತ್ತೇನೆ, ತಾವು ಬೆಳಿಗಿನ ಜಾವ 6.10 ಕ್ಕೆ ಧರ್ಮಸ್ಥಳಕ್ಕೆ ತಲುಪಿ

ನಂತರ ದಿಃ 24.09.2015 ರಂದು ರಾತ್ರಿ 11.10 ಕ್ಕೆ ಧರ್ಮಸ್ಥಳದಿಂದ ಬೆಂಗಳೂರಿಗೆ ಹೋಗುವ ಸಲುವಾಗಿ ಹಾಸನ-ಚನ್ನರಾಯಪಟ್ಟಣ ಮಾರ್ಗವಾಗಿ ಹೋಗುತ್ತಿದ್ದಾಗ, ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಬೈಪಾಸ್ ರಸ್ತೆಯಲ್ಲಿ ಬರುತ್ತಿದ್ದಾಗ, ಜೋರು ಮಳೆ ಬಂದ ಕಾರಣ ರಸ್ತೆ ಸರಿಯಾಗಿ ಕಾಣಿಸುತ್ತಿರಲಿಲ್ಲ, ಆಗ ಆರೋಪಿಯು ತಮ್ಮ ಮುಂದೆ ಹೋಗುತ್ತಿದ್ದ ಕೇರಳದ ಸರ್ಕಾರಿ ಬಸ್ಸಿಗೆ ಡಿಕ್ಕಿ ಪಡಿಸಿರುತ್ತಾನೆ, ಅದರಿಂದ ಸದರಿ ಬಸ್ಸಿನ ಹಿಂಭಾಗ ಮತ್ತು ತಮ್ಮ ಬಸ್ಸಿನ ಮುಂಭಾಗ ಜಖಂಗೊಂಡಿದ್ದು, ತನ್ನ ಬಲಭಾಗದ ಸೊಂಟಕ್ಕೆ ಸಹ ಪೆಟ್ಟಾಗಿರುತ್ತದೆ, ಆ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.7 ರವರನ್ನು ಪಾಟೀಸವಾಲನ್ನು ಮಾಡಿದರೂ, ಇವರ ಸಾಕ್ಷ್ಯದಿಂದ ಯಾವುದೇ ಅಂಶಗಳು ಹೊರಬಂದಿರುವುದಿಲ್ಲ. ಮುಂದುವರೆದು ಆರೋಪಿ ಪರ ವಕೀಲರು ಪ್ರಾಸಾ.7 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ಆರೋಪಿಯು ಆ ದಿನ ಎಚ್ಚರಿಕೆಯಿಂದ ಮತ್ತು ಸಾಮಾನ್ಯ ವೇಗದಲ್ಲಿ ಚಾಲನೆ ಮಾಡುತ್ತಿದ್ದರು ಎಂದು ಒಪ್ಪಿದ್ದು, ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಒಪ್ಪಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**14.** ಈ ಪ್ರಕರಣದಲ್ಲಿ ಪ್ರಾಸಾ.1 ರವರು ಪಿರ್ಯಾದಿಯಾಗಿದ್ದು, ಶಬ್ದ ಬಂದಾಗ ತಾನು ಎದ್ದು ನೋಡಿದ್ದಾಗಿ ನುಡಿದಿದ್ದು, ಅಭಿಯೋಜನಗೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿ ಹಾಗೂ ಚಾಲಕನಾಗಿದ್ದು, ಅಭಿಯೋಜನಗೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ.3 ಮತ್ತು 4 ರವರು ಮಹಜರ್ ಸಾಕ್ಷಿದಾರರಾಗಿದ್ದು, ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ.7 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಭಾಗಶಃ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಭಿಯೋಜನಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿ ಅಭಿಯೋಜನೆಯು ಮೌಖಿಕ ಮತ್ತು ದಸ್ತವೇಜು ಸಾಕ್ಷ್ಯದಿಂದ ಆರೋಪಿಯೇ ತನ್ನ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಮೃತರ ಸಾವಿಗೆ ಕಾರಣರಾಗಿರುತ್ತಾರೆಂದು ಸಂಶಯಾತೀತವಾಗಿ ಸಾಬೀತುಪಡಿಸಿರುವುದಿಲ್ಲ. ಹೀಗಾಗಿ ಈ ಮೇಲೆ ಚರ್ಚಿಸಿರುವಂತೆ ಅಭಿಯೋಜನೆಯು ಆರೋಪಿ ವಿರುದ್ಧ ಆಪಾದಿಸಿರುವ ಆರೋಪವನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂಬ ಸ್ಪಷ್ಟ ಅಭಿಪ್ರಾಯಕ್ಕೆ ಬಂದು **ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

**15.** **ಅಂಶ ಸಂಖ್ಯೆ ೦ಃ 2**೦ಃ ಅಂಶ ಸಂಖ್ಯೆ 1 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

೦ಃಃ **ಆದೇಶ** ೦ಃಃ

ದಂ.ಪ್ರ.ಸಂ. ಕಲಂಃ 255(1) ರನ್ವಯ ಆರೋಪಿ **ಭಾ.ದಂ.ಸಂ. ಕಲಂಃ 279** ರಡಿಯಲ್ಲಿ ದಂಡಿಸಬಹುದಾದ ಅಪರಾಧದಿಂದ ನಿರ್ದೋಷಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ **03 ನೇ ಜೂನ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**: : ಪರಿಚ್ಛೇದ : :**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

| | | |
|---|---|---|
| ಪ್ರಾಸಾ.1 | : | ಬಾಬುರಾಜ್ |
| ಪ್ರಾಸಾ.2 | : | ಕೃಷ್ಣಭಟ್ |
| ಪ್ರಾಸಾ.3 | : | ಬೀರೇಶ್ |
| ಪ್ರಾಸಾ.4 | : | ಮಣಿಕಂಠ |
| ಪ್ರಾಸಾ.5 | : | ಜಿ.ಎನ್.ರಾಜೇಗೌಡ |

**2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

| | | |
|---|---|---|
| ನಿಪಿ.1 | : | ದೂರು |
| ನಿಪಿ.1(ಎ,ಬಿ) | : | ಸಹಿಗಳು |
| ನಿಪಿ.2 | : | ಸ್ಥಳ ಮಹಜರ್ |
| ನಿಪಿ.2(ಎ,ಬಿ,ಸಿ,ಡಿ) | : | ಸಹಿಗಳು |
| ನಿಪಿ.3 | : | ಪ್ರಥಮ ವರ್ತಮಾನ ವರದಿ |
| ನಿಪಿ.3(ಎ) | : | ಸಹಿ |
| ನಿಪಿ.4 | : | ನಕಾಶೆ |

| | | |
|---|---|---|
| ನಿಪಿ.4(ಎ) | : | ಸಹಿ |
| ನಿಪಿ.5 ಮತ್ತು 6 | : | ಮುಚ್ಚಳಿಕೆ ಪತ್ರಗಳು |
| ನಿಪಿ.5(ಎ), 6(ಎ) | : | ಸಹಿಗಳು |
| ನಿಪಿ.7 | : | ಐ.ಎಂ.ವಿ ವರದಿ |

**3. ಆರೋಪಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ :**ಇಲ್ಲ

**4. ಆರೋಪಿಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ :** ಇಲ್ಲ

**5. ಅಭಿಯೋಜನೆಯ ಪರ ಗುರುತಿಸಲಾದ ಮುದ್ದೇಮಾಲುಗಳ ಪಟ್ಟಿ :** ಇಲ್ಲ

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**(ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**
**(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.)**

**ಃ ಆದೇಶ ಃ**

ದಂ.ಪ್ರ.ಸಂ. ಕಲಂಃ 255(1) ರನ್ವಯ ಆರೋಪಿ **ಭಾ.ದಂ.ಸಂ. ಕಲಂಃ 279** ರಡಿಯಲ್ಲಿ ದಂಡಿಸಬಹುದಾದ ಅಪರಾಧದಿಂದ ನಿರ್ದೋಷಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.